**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು**

**ಓ.ಎಸ್.ನಂ.376 /2016**

**ದಿನಾಂಕ:10.08.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

ಪಿ.ಡಬ್ಲ್ಯು:2

**ಮುಖ್ಯ ವಿಚಾರಣೆ: ವಾದಿ ಪರ ಶ್ರೀ. ಎ.ಎಂ.ಆರ್. ವಕೀಲರಿಂದ:-**

ನಾನು ವಾದಿ ಪರ ಸಾಕ್ಷಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ, ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

**ಪಾಟೀ ಸವಾಲು:1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ ಕೆ.ಎಸ್.ಆರ್. ವಕೀಲರಿಂದ:**

ನನ್ನ ಪ್ರಮಾಣಪತ್ರದಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನಾನು ಎಸ್.ಎಸ್.ಎಲ್.ಸಿ.ವರೆಗು ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಆಸ್ತಿಯ ಅಕ್ಕ-ಪಕ್ಕದಲ್ಲಿ ನನಗೆ ಸೇರಿದ ಆಸ್ತಿ ಇರುವುದಿಲ್ಲ. 2 ಮತ್ತು 3 ನೇ ಪ್ರತಿವಾದಿಗಳ ತಂದೆ ಗೊತ್ತಿರುತ್ತದೆ, ಆದರೆ ಅವರುಗಳು ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ 1 ನೇ ಪ್ರತಿವಾದಿಯ ಆಸ್ತಿ ಇರುತ್ತದೆ. 1 ನೇ ಪ್ರತಿವಾದಿಯ ಆಸ್ತಿಯ ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ದಾವಾ ಆಸ್ತಿಯನ್ನು ನಾನು ಇವತ್ತೂ ಸಹ ನೋಡಿದ್ದೇನೆ. 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ವಾದಿಗಳ ವಿರುದ್ಧ ಇದೇ ನ್ಯಾಯಾಲಯದಲ್ಲಿ ಸಿವಿಲ್ ದಾವೆ ದಾಖಲು ಮಾಡಿರುವ ವಿಚಾರ ಗೊತ್ತು. ದಾವಾ ಆಸ್ತಿ ಮತ್ತು 1 ನೇ ಪ್ರತಿವಾದಿಯ ಆಸ್ತಿ ನಡುವೆ ತಂತಿ-ಬೇಲಿ ಇದ್ದುದ್ದನ್ನು ನಾನು ಚಿಕ್ಕಂದಿನಿಂದಲೂ ನೋಡಿದ್ದೇನೆ. ಈಗ ಸದರಿ ತಂತಿ-ಬೇಲಿ ಇರುವುದಿಲ್ಲ. ವಾದಿಗಳು ತಮ್ಮ ಆಸ್ತಿಯನ್ನು ಒತ್ತುವರಿ ಮಾಡಿದ್ದಾರೆ ಎಂದು 1 ನೇ ಪ್ರತಿವಾದಿಯು ಕಡೂರು ಪೋಲೀಸ್ ಠಾಣೆಗೆ ದೂರು ನೀಡಿದ್ದರು ಅಂದರೆ ಸರಿ. ದಾವಾ ಆಸ್ತಿಯನ್ನು ಅಳತೆ ಮಾಡುವ ಸಮಯದಲ್ಲಿ ನಾನು ಹಾಜರಿರುವುದಿಲ್ಲ. ವಾದಿಗಳಿಗೆ ಸೇರಿದ ಆರ್.ಸಿ.ಸಿ.ಮನೆಯ ವಿಸ್ತೀರ್ಣ 42X42 ಅಡಿಗಳು ಮತ್ತು ಹೆಂಚಿನ ಮನೆ ಪೂರ್ವ-ಪಶ್ಚಿಮ 54 ಅಡಿಗಳು ಇರುತ್ತದೆ, ಪೂರ್ವ-ಪಶ್ಚಿಮದ ವಿಸ್ತೀರ್ಣ ಮರೆತುಹೋಗಿರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ:ಸಣ್ಣತಿಮ್ಮಯ್ಯರವರ ಆಸ್ತಿ,

ದಕ್ಷಿಣಕ್ಕೆಃ1 ನೇ ಪ್ರತಿವಾದಿ ಆಸ್ತಿ, ಉತ್ತರಕ್ಕೆಃಕಾಶಿವಿಶ್ವನಾಥರವರ ಆಸ್ತಿ ಮತ್ತು ಪಶ್ಚಿಮಕ್ಕೆಃಕೆ.ಎಂ.ರಸ್ತೆ ಇರುತ್ತದೆ.1 ನೇ ಪ್ರತಿವಾದಿಯ ಆಸ್ತಿಯ ಚಕ್ಕುಬಂದಿ ಹೇಳಲು ಗೊತ್ತಾಗುವುದಿಲ್ಲ. 1 ನೇ ವಾದಿ ಮಂಗಳ ನನ್ನ ಚಿಕ್ಕಮ್ಮ ಅಂದರೆ ಸರಿ. ಆ ಕಾರಣದಿಂದ ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಗಳು 20 ಅಡಿಗಳಷ್ಟು ಆಸ್ತಿಯನ್ನು ಒತ್ತುವರಿ ಮಾಡಲು ಪ್ರಯತ್ನಿಸಿರುತ್ತಾರೆ. ಪ್ರತಿವಾದಿಗಳು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಬಲಾಢ್ಯವಾಗಿದ್ದು, ಗೂಂಡಾಗಳ ಮುಖಾಂತರ ಬಂದು ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. 4 ನೇಪ್ರತಿವಾದಿಯು 1 ನೇ ಪ್ರತಿವಾದಿಗೆ ಮತ್ತು ವಾದಿಗೆ ಸೇರಿದ ಆಸ್ತಿಯನ್ನು ನಿಂತು ಅಳತೆ ಮಾಡಿಸಿದ್ದಾರೆ ಅಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕ-ಪಕ್ಕದಲ್ಲಿ ನನಗೆ ಸೇರಿದ ಆಸ್ತಿ ಇಲ್ಲದೇ ಇರುವುದರಿಂದ ನನ್ನ ಚಿಕ್ಕಮ್ಮ 1 ನೇ ವಾದಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ದಾವಾ ಆಸ್ತಿಯನ್ನು ಒತ್ತುವರಿ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. 1 ನೇ ವಾದಿ ಮತ್ತು ಅವರ ಗಂಡ ದಾವಾ ಆಸ್ತಿಯನ್ನು ಒತ್ತುವರಿ ಮಾಡುತ್ತಿದ್ದಾರೆಂದು 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ಯಾವತ್ತೂ ದೂರು ನೀಡಿಲ್ಲ ಅಂದರೆ ಸರಿ. ದಾವಾ ಆಸ್ತಿಯ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಅಂದರೆ ಸರಿಯಲ್ಲ.

<u>ಮರು ವಿಚಾರಣೆಃಇರುವುದಿಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.